# ‘ಸಿನಿಮಾ ನಂಗೆ ಮನಸಿನ ಹಂಬಲ ಬದುಕಿನ ಬೆಂಬಲ ಎರಡೂ ಹೌದು’

**ಹೊಟ್ಟೆಪಾಡಿಗಾಗಿ ಬೆಂಗಳೂರಿಗೆ ಬಂದು, ನಟನೆಯನ್ನೇ ನೆಚ್ಚಿಕೊಂಡಿರುವ ಹುಡುಗಿ ಕಾವ್ಯಾ ಗೌಡ. ‘ಒಂದೊಳ್ಳೆಯ ಪಾತ್ರ ಕೊಟ್ಟು ನೋಡಿ, ನನ್ನ ಪ್ರತಿಭೆ ಏನು ಅಂತ ಸಾಬೀತುಮಾಡ್ತೀನಿ’ ಎನ್ನುವುದು ಗಾಂಧಿನಗರದ ಮಂದಿಗೆ ಈ ಹುಡುಗಿಯ ವಿನಂತಿ.**

**■ ಪದ್ಮನಾಭ ಭಟ್**



‘ಸಿನಿಮಾ ಅಂದ್ರೆ ಗ್ಲ್ಯಾಮರ್ ಇರಬೇಕು ಅನ್ನೋದನ್ನು ನಾನೂ ಒಪ್ಕೋತೀನಿ. ಆದ್ರೆ ಗ್ಲ್ಯಾಮರ್ ಒಂದೇ ಮಾನದಂಡ ಆಗ್ಬಾರ್ದಲ್ವಾ? ನಮ್ಮೊಳಗಿನ ಪ್ರತಿಭೆಯನ್ನೂ ಗಣನೆಗೆ ತೆಗೆದುಕೊಳ್ಳಬೇಕಲ್ವಾ? ಎಲ್ಲ ಪ್ರತಿಭಾವಂತರೂ ಹೀರೋಯಿನ್ ಆಗಕ್ಕಾಗಲ್ಲ ಗೊತ್ತು ನಂಗೆ. ಅದನ್ನು ನಾನು ಬಯಸ್ತಾನೂ ಇಲ್ಲ. ಆದ್ರೆ ಒಂದು ಒಳ್ಳೆಯ ಪಾತ್ರವಾದರೂ ಸಿಗಬೇಕಲ್ವಾ?’

ಹೀಗೆ ಪಕ್ಕಾ ಮಂಡ್ಯದ ಶೈಲಿಯಲ್ಲಿಯೇ ಪಟಪಟಪಟ ಪ್ರಶ್ನೆಗಳನ್ನು ಎಸೆಯುತ್ತ ಹೋದರು ಕಾವ್ಯಾ ಗೌಡ. ಅವು ಉತ್ತರಗಳನ್ನು ಬೇಡುವ ಪ್ರಶ್ನೆಗಳಾಗಿರಲಿಲ್ಲ. ಬದಲಿಗೆ ಪರಿಸ್ಥಿತಿಯ ಬಗೆಗಿನ ವಿಷಾದವನ್ನು ಹೊರಹಾಕುವ ಮಾತುಗಳಾಗಿದ್ದವು.

ಕಾವ್ಯ ಮದ್ದೂರಿನ ತಣ್ಣೆದೊಡ್ಡಿ ಎಂಬ ಊರಿನವರು. ಎಸ್ಸೆಸ್ಸೆಲ್ಸಿಯಲ್ಲಿದ್ದಾಗ ತಂದೆ ತೀರಿಕೊಂಡರು. ಅಮ್ಮ ಆರೋಗ್ಯ, ತಂಗಿಯ ಓದು ಎರಡನ್ನೂ ಪೊರೆಯಲು ಕೆಲಸಕ್ಕೆ ಹೋಗಲೇಬೇಕಾದ ಅನಿವಾರ್ಯತೆಯಲ್ಲಿ ಕಾವ್ಯ, ಎಸ್ಸೆಸ್ಸೆಲ್ಸಿ ಮುಗಿಸಿ ಕೆಲಸ ಅರಿಸಿ ಬೆಂಗಳೂರಿಗೆ ಬಂದರು. ಅಲ್ಲಿ ಗಾರ್ಮೆಂಟ್ ಕೆಲಸಕ್ಕೆ ಸೇರಿಕೊಂಡರು. ಆದರೆ ಅವರಿಗಿನ್ನೂ ಓದುವ ಆಸೆ ಇತ್ತು. ಹಾಗಾಗಿ ಕೆಲಸ ಮಾಡಿಕೊಂಡೇ ದೂರಶಿಕ್ಷಣದ ಮೂಲಕ ಪಿಯುಸಿ ಪರೀಕ್ಷೆ ಕಟ್ಟಿದರು. ಮೊದಲ ಸಲ ಫೇಲಾದರು. ಮತ್ತೆ ಪರೀಕ್ಷೆ ಕಟ್ಟಿ ಪಾಸಾದರು. ಹೀಗೆ ಮೊದಲು ಸೋಲಿನ ನೋವುಂಡು ನಂತರ ಯಶದ ಸಿಹಿ ಕಾಣುವುದು ಅವರ ಬದುಕಿನುದ್ದಕ್ಕೂ ಬೆಳೆದುಕೊಂಡುಬಂದಿದೆ. ಸೋಲಿನ, ನಿರಾಸೆಯ ಕಹಿಯ ದಾರಿಯನ್ನು ದಾಟುತ್ತಿರುವ ಅವರಿಗ ಯಶದ ಸಿಹಿಯ ನಿರೀಕ್ಷೆಯಲ್ಲಿದ್ದಾರೆ.

ಗಾರ್ಮೆಂಟ್ ಕೆಲಸದಲ್ಲಿದ್ದಾಗಲೇ ಅವರಿಗೆ ಸಿನಿಮಾ ನಟನೆಯ ಕುರಿತಾದ ಒಂದು ಪೋಸ್ಟರ್ ನೋಡಿದರು. ಅದು ಒಂದು ನಟನಾತರಬೇತಿ ಶಿಬಿರದ ಪೋಸ್ಟರ್ ಆಗಿತ್ತು. ಅಲ್ಲಿಗೆ ಹೋದಾಗ ಕಿರುತೆರೆ ರಂಗದ ಕೆಲವು ಮಂದಿಯ ಪರಿಚಯ ಆಯಿತು. ಅವರ ಮೂಲಕವೇ ‘ರಂಗೋಲಿ’ ಎಂಬ ಧಾರಾವಾಹಿಯಲ್ಲಿ ಪುಟ್ಟ ಪಾತ್ರದಲ್ಲಿ ನಟಿಸುವ ಅವಕಾಶವೂ ಸಿಕ್ಕಿತು. ನಂತರ ಮತ್ತೆ ಕೆಲವು ಕಾಲ ಅವಕಾಶವೇ ಸಿಗಲಿಲ್ಲ. ಹಾಗಾಗಿ ಒಂದು ನರ್ಸಿಂಗ್ ಹೋಮ್‌ನಲ್ಲಿ ರಿಸಿಪ್ಶನಿಸ್ಟ್ ಆಗಿ ಸೇರಿಕೊಂಡರು. ಅಲ್ಲಿ ಕೆಲಸ ಮಾಡುತ್ತಿದ್ದಾಗಲೇ, ’ಚಿಕ್ಕಮ್ಮ’ ಎನ್ನುವ ಇನ್ನೊಂದು ಧಾರಾವಾಹಿಯಲ್ಲಿ ನಟಿಸುವ ಅವಕಾಶ ಬಂತು. ಅಲ್ಲಿಂದ ‘ರಾಜಾ ಹುಲಿ’ ಸಿನಿಮಾದಲ್ಲಿ ಪುಟ್ಟ ಪಾತ್ರದಲ್ಲಿ ನಟಿಸುವ ಮೂಲಕ ಹಿರಿತೆರೆಗೂ ಜಿಗಿದರು. ‘ಶಾಲಿನಿ’, ‘ಮುಖವಾಡವಿಲ್ಲದವನು’, ’ಮುಂದಿನ ಬದಲಾವಣೆ’, ‘ಕಟ್ಟುಕಥೆ’, ‘ಬೇತಾಳ’, ‘ಫ್ರೆಂಚ್ ಬಿರಿಯಾನಿ’ ಹೀಗೆ ಹಲವು ಸಿನಿಮಾಗಳಲ್ಲಿ ಪುಟ್ಟ ಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರೂ ಕಾವ್ಯಾ ಅವರ ಪ್ರತಿಭೆಯನ್ನು ಒರೆಗೆ ಹಚ್ಚುವ, ನಟನಾಬದುಕಿಗೆ ತಿರುವು ನೀಡುವ ಪಾತ್ರವೊಂದು ಇನ್ನೂ ಸಿಕ್ಕಿಲ್ಲ.

‘ಹೀರೊಯಿನ್ ಆಗಬೇಕು ಎಂಬ ಆಸೆಯೇನೂ ನನಗಿಲ್ಲ. ಹುಚ್ಚಿ ಪಾತ್ರವಾದ್ರೂ ಸೈ, ಭಿಕ್ಷುಕಿ, ಅಜ್ಜಿ ಹೀಗೆ ಯಾವ ಪಾತ್ರ ಕೊಟ್ಟರೂ ನಟಿಸುತ್ತೇನೆ’ ಎನ್ನುವ ಇವರಿಗೆ